ಕಲ್ಲಿನಂತೆ ಕಾಣುವ 'ಲಿಥೋಪ್ಸ್'ಗಳು ಒಳಾಂಗಣ, ಹೊರಾಂಗಣ ಎರಡಕ್ಕೂ ಸೂಕ್ತ.

## ಮರುಭೂಮಿಯ ಮಕ್ಕಳು

ಇಂದು ಜಗತ್ತಿನ ಮೂಲೆ ಮೂಲೆ ಆವರಿಸಿರುವ ಸಕ್ಯುಲೆಂಟ್ಸ್‌ಗಳು ಮೂಲತಃ ಮರಳುಗಾಡಿನಂತಹ ಶುಷ್ಕ ಪ್ರದೇಶದವು. ಒಣ ಹವೆಯ ದಕ್ಷಿಣ ಆಫ್ರಿಕಾ ವಿಶ್ವದ ಅರ್ಧಕ್ಕೂ ಹೆಚ್ಚು ಜಾತಿಯ ಸಕ್ಯುಲೆಂಟ್ಸ್‌ಗಳ ತವರು. ವಿಶ್ವದ ಅತ್ಯಂತ ದೊಡ್ಡ ಸಕ್ಯುಲೆಂಟ್ಸ್, 92 ಅಡಿ ಅಗಲದ, 82 ಅಡಿ ಎತ್ತರದ ಆಫ್ರಿಕಾದ 'ಬಾವೊಬಾಬ್' ಮರ. ನಮ್ಮಲ್ಲಿ ಕಾಣುಬರುವ ಸಕ್ಯುಲೆಂಟ್ಸ್‌ಗಳಾದ ಅಲೊವೆರಾ, ಕಲಾಂಚೊ, ಕಳ್ಳಿಗಳು, ಅಡೇನಿಯಮ್ ಕೂಡಾ ಅಲ್ಲಿಂದಲೇ ಪಸರಿಸಿದ ಜಾತಿಗಳು. ಬರಗಾಲವನ್ನೂ ಬೆದರಿಸಿದ ಈ ಹಸಿರುವೀರರು ಒಣ ಹವೆಗೆ ಕುತೂಹಲಕಾರಿ ರೀತಿಯಲ್ಲಿ ಒಗ್ಗಿಕೊಂಡಿದ್ದಾರೆ.

ಸಸ್ಯಗಳು ಎಲೆಗಳಲ್ಲಿರುವ ಅತಿ ಸೂಕ್ಷ್ಮ 'ಸ್ಟೋಮೆಟಾ' ರಂಧ್ರಗಳ ಮೂಲಕ ಇಂಗಾಲವನ್ನು ಒಳಗೆಳೆದುಕೊಂಡು, ಸ್ಥಿರೀಕರಿಸಿ, ದ್ಯುತಿ ಸಂಶ್ಲೇಷಣಾ ಕ್ರಿಯೆಯನ್ನು ನಡೆಸುತ್ತವೆ. ಹೀಗೆ ಇಂಗಾಲವನ್ನು ಎಳೆಯುವಾಗ ಆಮ್ಲಜನಕ ಹಾಗೂ ನೀರು ತಾನಾಗಿಯೇ ಹೊರಹೋಗಿ ವಾತಾವರಣ ಸೇರುತ್ತವೆ. ಇಂಗಾಲದ ಆಹಾರದ ಆಸೆಯಲ್ಲಿ ಸಸ್ಯಗಳು ನೀರನ್ನು ಕಳೆದುಕೊಳ್ಳುವ ಈ ಕ್ರಿಯೆಯು ವಿಜ್ಞಾನದ ಆಕರ್ಷಕ ವಿದ್ಯಮಾನ.





ಮಳೆಯೇ ಬೀಳದ ನೀರಿನ ತತ್ವಾರವಿರುವ ಮರಳುಗಾಡಿನ ಕೆಲವು ಸಸ್ಯಗಳು ವಿಕಸನದ ಹಾದಿಯಲ್ಲಿ ನೀರುಳಿಸುವ ಪ್ರಯತ್ನಕ್ಕೆ ಇಳಿದಿದ್ದೇ ಸಕ್ಯುಲೆಂಟ್ಸ್‌ಗಳ ಉಗಮಕ್ಕೆ ಕಾರಣವಾಯಿತು. ನೀರಿನ ಆವಿಯಾಗುವಿಕೆ ತಡೆಯಲು ಸ್ಟೋಮೆಟಾ ರಂಧ್ರಗಳನ್ನು ಹಗಲಿಡೀ ಮುಚ್ಚಿಟ್ಟು, ರಾತ್ರಿ ಹೊತ್ತಲ್ಲಿ ತಂಪು ವಾತಾವರಣವಿದ್ದಾಗ ಮಾತ್ರ ತೆರೆಯುವುದು; ಎಲೆ ಕಾಂಡಗಳಲ್ಲಿ ನೀರಿನ ಸಂಗ್ರಹ; ಚೂಪು ಮುಳ್ಳಿನಂತಹ ಎಲೆಗಳು; ಎಲೆಗಳ ಮೇಲೆ ಬೂದಿಯ ಹೊದಿಕೆ – ಹೀಗೆ ಒಣ ಪ್ರದೇಶಕ್ಕೆ ಒಗ್ಗಿಕೊಳ್ಳಲು ಇವು ಅನುಸರಿಸಿದ ರೂಪಾಂತರ ಹಲವಾರು.

## ಆರೈಕೆ ಹೇಗೆ?

ಮಣ್ಣು–ನೀರು–ಬೆಳಕಿನ ಸರಿಯಾದ ವ್ಯವಸ್ಥೆಯಾದಲ್ಲಿ ಹೆಚ್ಚೇನೂ ನಿರ್ವಹಣೆ ಬೇಡದ ಈ ಸಸ್ಯಗಳ ಆರೈಕೆ ಸುಲಭ. ಎಲೆಗಳಲ್ಲೇ ನೀರನ್ನು ಸಂಗ್ರಹಿಸುವ ಈ ಕಲಾವಿದರಿಗೆ ನೀರೇ ಶತ್ರು! ನೀರು ಹೆಚ್ಚಾದರೆ ಕೊಳೆಯುವ, ನೀರು ಕಮ್ಮಿಯಾದರೆ ಸುಕ್ಕಾಗಿ ಸಾಯುವ ಸಕ್ಯುಲೆಂಟ್ಸ್‌ಗಳಲ್ಲಿ ನೀರಿನ ನಿರ್ವಹಣೆ ಅತ್ಯಂತ ಮಹತ್ವದ್ದು. ಬೇರೆಲ್ಲಾ ಸಸ್ಯಗಳಂತೆ ಮನಸೋ ಇಚ್ಛೆ ನೀರು ಹೊಯ್ದರೆ ಗಿಡಗಳ ಸಾವು ಗ್ಯಾರಂಟಿ. ಹಾಗಾಗಿ ಸಕ್ಯುಲೆಂಟ್ಸ್‌ಗಳನ್ನು ಉಳಿದ ಸಸ್ಯಗಳಿಂದ ದೂರವಿರಿಸಿ ಬೆಚ್ಚಗೆ ಕಾಳಜಿ ಮಾಡುವುದು ಒಳ್ಳೆಯದು.

ಹೆಚ್ಚೇನೂ ಆಳಕ್ಕೆ ಇಳಿಯದೆ ಮಣ್ಣಿನ ಮೇಲಿನ ಪದರದಲ್ಲಿಯೇ ಉಳಿಯುವ ಬೇರುಗಳನ್ನು ಹೊಂದಿರುವ ಸಸ್ಯವಾದ್ದರಿಂದ 2–3 ಇಂಚಿನ ಚಿಕ್ಕ ಸಿರಾಮಿಕ್, ಟೆರಾಕೋಟಾ, ಪ್ಲಾಸ್ಟಿಕ್, ಪಾಟ್‌ಗಳೇ ಸರಿ. ಹೆಚ್ಚು ನೀರು ಹೀರದ, ನೀರು ಬಸಿದು ಹೋಗುವ, ಸಲ್ಪವೇ ಮಣ್ಣು, ಹೆಚ್ಚು ಮರಳಿನ ಪಾಟ್ ಮಿಶ್ರಣ ಒಳ್ಳೆಯದು. ಸಕ್ಯುಲೆಂಟ್ಸ್‌ಗಳಿಗಾಗಿಯೇ ಲಭ್ಯವಿರುವ ವಿಶೇಷ ಮಿಶ್ರಣವನ್ನು ಬಳಸಬಹುದು. ವಾತಾವರಣದ ಹಾಗೂ ಪಾಟ್ ಮಿಶ್ರಣದ ತೇವಾಂಶಕ್ಕೆ ಅನುಗುಣವಾಗಿ ಬೇಸಿಗೆಯಲ್ಲಿ ಮೂರು ದಿನಕ್ಕೊಮ್ಮೆ, ತೀವ್ರ ಮಳೆಗಾಲದಲ್ಲಿ ಎರಡು ವಾರಕ್ಕೊಮ್ಮೆ ನೀರುಣಿಸಿದರೆ ಸಾಕು. ನೀರುಣಿಸುವ ಅಂತರದಲ್ಲಿ ಪಾಟ್ ಮಿಶ್ರಣದ ನೀರೆಲ್ಲಾ ಆರಿ ಪೂರ್ತಿ ಒಣಗಿರಬೇಕು. ಹೊರಾಂಗಣದ ಪ್ರಖರ ಬಿಸಿಲು, ಒಳಾಂಗಣದ ಮಂದ ಬೆಳಕಾದರೂ ಅಡ್ಡಿಯಿಲ್ಲ, ಆದರೆ ದಿನದ ಒಂದು ವೇಳೆಯಾದರೂ ಸೂರ್ಯನ ಕಿರಣಗಳ ಭೇಟಿ ಅಗತ್ಯ. ಕೀಟ–ರೋಗಗಳ ಬಾಧೆ ಯಾವುದೂ ಇಲ್ಲವಾದರೂ ರಸ ಹೀರುವ ಕೀಟಗಳು ಕಂಡುಬಂದಲ್ಲಿ ಬೇವಿನ ಎಣ್ಣೆಯನ್ನು ಉಪಯೋಗಿಸಬಹುದು.

## ಉಡುಗೊರೆ ನೀಡಿ

ಸಕ್ಯುಲೆಂಟ್ಸ್‌ಗಳ ಪ್ರಸರಣ ಅತ್ಯಂತ ಸುಲಭದ, ಖುಷಿ ಕೊಡುವ ಚಟುವಟಿಕೆ. ಬೆಳೆದ ಒಂದೇ ಒಂದು ಎಲೆಯನ್ನು ತಾಯಿಯಿಂದ ಗಾಯವಾಗದಂತೆ ಬೇರ್ಪಡಿಸಿ, ತೇವವಾದ 'ಕೋಕೋಪೀಟ್' ಮಿಶ್ರಣದ ಮೇಲಿಟ್ಟರೆ ಸಾಕು. ತಿಂಗಳೊಳಗೆ ಎಲೆಯ ತುದಿಯಿಂದ ಮರಿಗಳು ಹುಟ್ಟಿರುತ್ತವೆ. ಒಂದು ಗಿಡದಿಂದ ದೊಡ್ಡ ಸಂತಾನವೊಂದನ್ನೇ ಸೃಷ್ಟಿಸಬಹುದು.

ಚಂದದ ಗುಣಗಳಿರುವ ಸಕ್ಯುಲೆಂಟ್ಸ್‌ಗಳು ಸಂಗ್ರಹ ಯೋಗ್ಯವಾದ ಸಸ್ಯಗಳು. ಒಂದೆರಡು ಗಿಡಗಳನ್ನು ಗಿಡ ಸಾಯಿಸದೆ ಉತ್ತಮ ಗಾರ್ಡನರ್ ಹುಟ್ಟುವುದು ಸಾಧ್ಯವಿಲ್ಲವಂತೆ. ಸಕ್ಯುಲೆಂಟ್ಸ್‌ಗಳ ಲೋಕಕ್ಕೆ ಹೊಸದಾಗಿ ಪರಿಚಯವಾದಾಗ ಆರೈಕೆಯ ವ್ಯತ್ಯಾಸದಿಂದಾಗಿ ಕೆಲವು ಗಿಡಗಳು ಸಾಯುವುದು ಸಾಮಾನ್ಯ. ಆದರೂ ಈ ಚಂದವನ್ನು ಒಮ್ಮೆ ಕೊಂಡು ನಿಮ್ಮೂರಿನ ಹವಾಗುಣಕ್ಕೆ ತಕ್ಕುದಾದ ಆರೈಕೆ ಕಂಡುಕೊಳ್ಳಿ. ವಿಶೇಷ ದಿನದಂದು ಉಡುಗೊರೆ ನೀಡಿ.

ಪ್ರತಿಕ್ರಿಯಿಸಿ: feedback@sudha.co.in